**ಅಪರ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ಯವರ ನ್ಯಾಯಾಲಯ,**
**ವಿರಾಜಪೇಟೆ**
**ಸಿ. ಸಿ. ನಂಃ1003/2010**

ಪಿಡಬ್ಲ್ಯುಃ **5**
ಸಿಡಬ್ಲ್ಯುಃ 6

| | | |
|---|---|---|
| ಸಾಕ್ಷಿಯ ಹೆಸರು | ಃ | ಬಿ ಎಂ ಪೂವಮ್ಮ |
| ಗಂಡನ ಹೆಸರು | ಃ | ಲೇಟ್ ಕೆ ಎನ್ ಮೋಹನ್ |
| ವಯಸ್ಸು | ಃ | 73 ವರ್ಷ |
| ವೃತ್ತಿ | ಃ | ನಿವೃತ್ತ ಗ್ರಾಮ ಪಂಚಾಯಿತಿ ಕಾರ್ಯದರ್ಶಿ |
| ವಾಸಸ್ಥಳ | ಃ | ಚೆಂಬೆಬೆಳ್ಳೂರು ಗ್ರಾಮ. |

**ದಿನಾಂಕಃ 18-05-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ. ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-**

1. ಚಾಸಾಃ 7 ಮತ್ತು 8 ರವರ ಪರಿಚಯ ಇರುತ್ತದೆ. ಆರೋಪಿ ಪರಿಚಯ ಇರುತ್ತದೆ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ, ಸದರಿ ದಾಖಲಾತಿ ಅಮಾನತ್ತು ಮಹಜರ್ ಆಗಿದ್ದು, ಅದನ್ನು ನಿಪಿ-6 ಎಂದು ಗುರುತಿಸಲಾಯಿತು. ಸಾಕ್ಷಿಯು ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಎಲ್ಲಿ, ಯಾವಾಗ ಮಾಡಿರುತ್ತೇನೆಂದು ನನಗೆ ನೆನಪಿಲ್ಲ. ನಿಪಿ-6 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

**ಮುಖ್ಯ ವಿಚಾರಣೆ ಃ ಮುಕ್ತಾಯ**

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸರಕಾರಿ ಅಭಿಯೋಜಕರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು)**

**ಪಾಟೀ ಸವಾಲು ಃ ಶ್ರೀ. ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-**

1. ದಿಃ 24-06-2010 ರಂದು ಸಮಯ ಮದ್ಯಾಹ್ನ 2.00 ರಿಂದ 6.00 ಗಂಟೆಯವರೆಗೆ ಪೊಲೀಸರು ನನ್ನ ಹಾಗೂ ಚಾಸಾಃ7 ಮತ್ತು 8 ರವರ ಸಮಕ್ಷಮ (1) ಚಾಸಾಃ1 ರವರಿಂದ ಇಂಗ್ಲಿಷ್ ಮತ್ತು ಕನ್ನಡ ಪ್ರಿಂಟ್ ಮಾಡಲಾಗಿತ್ತು, ಪೊಲೀಸರ ಜನರಲ್ ಪುಸ್ತಕದಿಂದ ತಲಾ 4 ಹಸ್ತಾಕ್ಷರಗಳನ್ನು ಮತ್ತು 1 ರಿಂದ 10 ರವರೆಗಿನ ಅಂಕಿಗಳನ್ನು ಒಂದು ಹಾಳೆಯಲ್ಲಿ 5 ಬಾರಿ

ಬರೆಸಿ ಮತ್ತು ಅವರ ಸಹಿಯನ್ನು ಮತ್ತೊಂದು ಹಾಳೆಯಲ್ಲಿ 6 ಬಾರಿ ಬರೆಸಲಾಯಿತು, ಇದಕ್ಕೆ ಪಿ-1 ರಿಂದ ಪಿ-10 ಎಂದು ಗುರುತಿಸಲಾಯಿತು ಎಂದರೆ ಸರಿಯಲ್ಲ. (2) ಚಾಸಾಃ2 ರವರಿಂದ ಇಂಗ್ಲಿಷ್ ಪ್ರಿಂಟ್ ಮಾಡಲಾಯಿತು, ಪೊಲೀಸರ ಜನರಲ್ ಪುಸ್ತಕದಿಂದ ತಲಾ 6 ಹಸ್ತಾಕ್ಷರಗಳನ್ನು ಮತ್ತು 1 ರಿಂದ 10 ರವರೆಗಿನ ಅಂಕಿಗಳನ್ನು ಒಂದು ಹಾಳೆಯಲ್ಲಿ 6 ಬಾರಿ ಬರೆಸಿ ಮತ್ತು ಅವರ ಸಹಿಯನ್ನು ಮತ್ತೊಂದು ಹಾಳೆಯಲ್ಲಿ 6 ಬಾರಿ ಬರೆಸಲಾಯಿತು, ಇದಕ್ಕೆ ಕ್ಯೂ-1 ರಿಂದ ಕ್ಯೂ-8 ಎಂದು ಗುರುತಿಸಲಾಯಿತು ಎಂದರೆ ಸರಿಯಲ್ಲ.

2) ನಂತರ ಇವುಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಖಾಕಿ ಬಣ್ಣದ ಲಕೋಟೆಯಲ್ಲಿ ಹಾಕಿ, ಸದರಿ ಲಕೋಟೆಯ ಮೇಲೆ ಎಂ ಎಂಬ ಅಕ್ಷರ ಬರೆದು, ಅದರ ಮೇಲೆ ನನ್ನ ಹಾಗೂ ಚಾಸಾಃ7 ಮತ್ತು 8 ರವರು ಸಹಿ ಹಾಗೂ ಸೀಲು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ಪೊಲೀಸರು ನನ್ನ ಹಾಗೂ ಚಾಸಾಃ7 ಮತ್ತು 8 ರವರ ಸಮಕ್ಷಮ ನಿಪಿ-6 ರಂತೆ ಮಹಜರು ಕ್ರಮ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ.

3) ದಿಃ19-11-2009 ರಂದು ವಿರಾಜಪೇಟೆ ಗ್ರಾಮಾಂತರ ಪಿ ಎಸ್ ರವರು ಕಳುಹಿಸಿಕೊಟ್ಟ ಕ್ರಿ.ಮಿಸ್ಲೇನಿಯಸ್ ನಂಃ 193/2009 ಕ್ಕೆ ಸಂಬಂಧಿಸಿದ ಪತ್ರದೊಂದಿಗೆ ನಮ್ಮ ಗ್ರಾಮ ಪಂಚಾಯಿತಿಯ ದೃಡೀಕರಣ ಪತ್ರ ಸಂಃ 113 ವಹಿ/ 2008-09 ದಿಃ31-07-2009 ರ ದಾಖಲೆಯನ್ನು ನೋಡಿದ್ದೇನೆ. ಸದರಿ ದಾಖಲೆಯಲ್ಲಿರುವ ಹಸ್ತಾಕ್ಷರ ನಮ್ಮ ಕಚೇರಿಯ ಸಿಬ್ಬಂದಿಯಾದ ಸಿ ಅರ್ ರವಿಯಾಗಲೀ, ನನ್ನದಾಗಲೀ ಆಗಿರುವುದಿಲ್ಲ. ಅದೇ ರೀತಿ ಕೆಳಗೆ ಕಾರ್ಯದರ್ಶಿ, ಗ್ರಾಮ ಪಂಚಾಯಿತಿ ಸೀಲು ಹಾಗೂ ಸಹಿಯನ್ನು ಮಾಡಿರುವುದಿಲ್ಲ. ಗ್ರಾಮ ಪಂಚಾಯಿತಿ ಅಧ್ಯಕ್ಷಕರು ಸೀಲು ಹಾಗೂ ಸಹಿಯನ್ನು ಮಾಡಿರುವುದಿಲ್ಲ. ಈ ದಾಖಲೆಯನ್ನು ನಮ್ಮ ಗ್ರಾಮ ಪಂಚಾಯಿತಿಯಲ್ಲಿ ದಾಖಲೆಗಳಿಗೆ ಹೊಂದಿಸಿ ನೋಡಿದಾಗ, ಆರೋಪಿಯು ಫೋರ್ಜರಿ ಮಾಡಿರುವುದಾಗಿ ತಿಳಿದು ಬಂದಿರುತ್ತದೆ ಎಂದರೆ ಸರಿಯಲ್ಲ. ನಮ್ಮ ಗ್ರಾಮ ಪಂಚಾಯಿತಿಯಲ್ಲಿದ್ದ ದಾಖಲೆಯನ್ನು ಪೊಲೀಸ್ ಉಪ ನಿರೀಕ್ಷಕರಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

4) ನಂತರ ದಿಃ 24-06-2010 ರಂದು ಪೊಲೀಸರ ಮುಂದೆ ಈ ಬಗ್ಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಹೇಳಿಕೆಯನ್ನು ನಿರಾಕರಿಸಿದ ಕಾರಣ ನಿಪಿ-7 ಎಂದು

ಗುರುತಿಸಲಾಯಿತು.

**ಪಾಟೀ ಸವಾಲು ಃ ಮುಕ್ತಾಯ**

**ಮರು ವಿಚಾರಣೆ ಃ ಇಲ್ಲ**

**ಪಾಟೀ ಸವಾಲು ಃ ಆರೋಪಿ ಪರ ಶ್ರೀಮತಿ ಬಿ ಡಿ ಪಿ ವಕೀಲರಿಂದಃ ಪಾಟೀಸವಾಲು ಇರುವುದಿಲ್ಲ ಎಂದು ನುಡಿಯುತ್ತಾರೆ.**

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇ.

ಸಹಿ/-

**ಪ್ರದೀಪ ಪೋತದಾರ**
**ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ**
**ವಿರಾಜಪೇಟೆ**